1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 1249/2025**

ಹೆಸರುಃ ದೇವಪ್ಪ ಚಾಸಾಃ1

ತಂದೆಃ ಪುಟ್ಟಪ್ಪ ಪ್ರಾಸಾ: 1

ವಯಸ್ಸುಃ 68 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಮಾವಿನಕಟ್ಟೆ ಗ್ರಾಮ

ಸಾಕ್ಷಿಗೆ ದಿನಾಂಕಃ 24-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ರಂಗನಾಥ ನನ್ನ ಮಗ. ಮೃತ ಶಶಿಧರ ನಮ್ಮ ಗ್ರಾಮಸ್ಥ. ನ್ನ ಮಗನಿಗೆ ಅಜ್ಜಿಹಳ್ಳಿ ಗ್ರಮದಲ್ಲಿ ಅಪಘಾತವಾಗಿದ್ದು, ಸ್ಥಳೀಯರು ತಿಳಿಸಿದ ಮೇರೆಗೆ ಚನ್ನಗಿರಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಮಗನ ಮೃತ ಶರೀರ ಆಸ್ಪತ್ರೆಯಲ್ಲಿರುತ್ತದೆ. ಸದರಿಯವರಿಗೆ ಯಾರು ಅಪಘಾತ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಸದರಿ ವಿಚಾರವಾಗಿ ದೂರನ್ನು ದಾಖಲಿಸಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ ಸದರಿ ದಾಖಲೆಯಲ್ಲಿ ನನ್ನ ಸಹಿ ಇದೆ ಸದರಿ ದಾಖಲೆ ದೂರಾಗಿದ್ದು ಅದನು ನಿಪಿ-1 ಎಂದು , ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ನಿಶಾನೆಗೊಳಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಅದನ್ನು ಎಲ್ಲಿ ಯಾವಾಗ ಬರೆದರು ಎಂದು ನನಗೆ ಗೊತ್ತಿಲ್ಲ.

**(ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು. )**

ಸಾಕ್ಷಿಗೆ ದಿನಾಂಕಃ29-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ನಾನು ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ನಿಪಿ-3 ನ್ನು ಅಜ್ಜಿಹಳ್ಳಿ ರಸ್ತೆಯಲ್ಲಿ ತೆಗೆಯಲಾಗಿರುತ್ತದೆ.

ನಾನು ಯಾವುದೇ ಮುಂದುವರೆದ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಗೆ ಪ್ರತಿಕೂಲ ಸಾಕ್ಷಿ**

**ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 11-06-2023 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಮಿಕ್ಸಿ ರಿಪೇರಿಗೆಂದು ನನ್ನ ಮಗ ಶಶಿಧರ ಎನ್ನುವವರ ಜೊತೆ ಅವರ ಬೈಕ್ ಅದ ಕೆಎ-14-ವೈ-5866 ರಲ್ಲಿ ಹಿಂಬದಿ ಸವಾರನಾಗಿ ಹೋಗಿದ್ದು, ಕೆಲಸ ಮುಗಿಸಿಕೊಂಡು ಮಾನವಿನಕಟ್ಟೆಗೆ ಬರುತ್ತಿರುವಾಗ ಶಶಿಧರ ಸದರಿ ಬೈಕ್ ನ್ನು ಚಲಾಯಿಸುತ್ತಿದ್ದು ರಾತ್ರಿ 9.00 ಗಂಟೆ ಸಮಯದಲ್ಲಿ ಅಜ್ಜಿಹಳ್ಳಿಯ ಬೇಕರಿಯ ಮುಂದೆ ಎನ್ ಹೆಚ್-13ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿರುವಾಗ ಚನ್ನಗಿರಿ ಕಡೆಯಿಂದ ಬಂದ ಕೆಎ-05-ಎಂಎನ್-6918 ನ ಕಾರಿನ ಚಾಲಕ ತನ್ನ ಕಾರನ್ನು ಅತೀ ವೇಗ ಮತ್ತು ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿದರು ಎಂದರೆ ಸರಿ. ಅಪಘಾತದಿಂದ ಬೈಕ್ ನಲ್ಲಿದ್ದವರು ಕೆಳಗೆ ಬಿದ್ದ ಪರಿಣಾಮ ನನ್ನ ಮಗನಿಗೆ ತಲೆಗೆ , ಮುಖಕ್ಕೆ ಕೈ ಕಾಲುಗಳಿಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಮತ್ತು ಶಶಿಧರನಿಗೆ ತೀವ್ರವಾದ ಪೆಟ್ಟು ಬಿದ್ದಿರುತ್ತದೆ ಎಂದು ದೂರನ್ನು ದಾಖಲಿಸಿದ್ದೆನೆ ಎಂದರೆ ಸರಿ. ಸದರಿ ಕಾರು ಚಾಲಕ ಅಪಘಾತದ ತರುವಾಯ ಕಾರನ್ನು ನಿಲ್ಲಿಸದೇ ಹಾಗೆಯೇ ಹೋಗಿರುತ್ತಾನೆ ಎಂದರೆ ಸರಿ. ಸ್ಥಳೀಯ ಸದರಿ ಗಾಯಾಳುಗಳನ್ನು ಯಾವುದೋ ವಾಹನದಲ್ಲಿ ಚನ್ನಗಿರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ತೀವ್ರಗಾಯಗೊಂಡ ಶಶಿಧರನನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಆಸ್ಪತ್ರೆಗೆ ಅಂಬ್ಯೂಲೆನ್ಸ್ ನಲ್ಲಿ ಕಳುಹಿಸಿದರು ಎಂದರೆ ಸರಿ. ಸದರಿ ಅಪಘಾತಪಡಿಸಿದ ಕಾರು ಚಾಲಕನ ಹೆಸರು ತಿಳಿದಿಲ್ಲವೆಂದು ಆತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನಿಪಿ-1 ರಂತೆ ದೂರು ದಾಖಲಿಸಿರುತ್ತೇನೆ ಎಂದರೆ ಸರಿ.

13-06-2023 ರಂದು ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮದ್ಯಾಹ್ನ 12.30 ರಿಂದ 1.30ರವರೆಗೆ ನಿಪಿ-2 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಅದಕ್ಕೆ ನಮ್ಮ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಸಮಯಕ್ಕೆ ನಿಪಿ-3 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿ. ನನ್ನ ಮಗ ಮೃತಪಟ್ಟ ಕಾರಣ ನಾನು ನನ್ನ ಹೇಳಿಕೆಯಲ್ಲಿ ಸದರಿ ಬೈಕ್ ನಂ ಕೆಎ-14/ ವೈ-5866 ಎಂದು ತಪ್ಪಾಗಿ ನಮೂದಿಸಿದ್ದು ಆದರೆ ಸದರಿ ಬೈಕ್ ನಂ ಕೆಎ-14-ಇವೈ-5866 ಆಗಿದೆ ಎಂದು ನನ್ನ ಮರು

ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಕಾರನ್ನು ಅಪಘಾತದ ಸಮಯದಲ್ಲಿ ಯಾರು ಚಲಾಯಿಸುತ್ತಿದ್ದರು ಎಂದು ನನಗೆ ನಿಪಿ-1 ರ ಸಮಯದಲ್ಲಿ ತಿಳಿದಿಲ್ಲ ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು  ನಾನು ಮೊದಲೇ ನೋಡಿರುತ್ತೇನೆ ಎಂದರೆ ಸರಿಯಲ್ಲ.  ಈ ದಿನ ನಾಯಾಲಯದಲ್ಲಿ ಹಾಜರಿರುವ ಆರೋಪಿಯೆ ಅಪಘಾತಪಡಿಸಿ  ನನ್ನ ಮಗ ಮತ್ತು ಶಶಿಧರ ಮೃತಪಡಲು ಕಾರಣನಾಗಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು -  ಆರೋಪಿತರ  ಪರ ಶ್ರೀ ಹೆಚ್ ಟಿ ವಕೀಲರಿಂದ –**

ನಿಪಿ-2 ರ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಸದರಿ ಅಪಘಾತ ಯಾವಾಗ ಅಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ  ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**1270/2025**

ಹೆಸರುಃ ಕೆ ತಿರುಮಲಾ ಬೋವಿ ಚಾಸಾಃ 2

ತಂದೆಃ ಕೃಷ್ಣಬೋವಿ ಪ್ರಾಸಾ: 1

ವಯಸ್ಸುಃ 75 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಪಾಂಡೋಮಟ್ಟಿ ಗ್ರಾಮ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 03-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಮತ್ತು ಅಮಾನತು ಮಹಜರಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸಹಿಯನ್ನು ನಾನು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನನ್ನು ವಶಪಡಿಸಿಕೊಂಡಿರುವುದಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಫೊಟೋದಲ್ಲಿ ನಾನು ಇದ್ದೆನೆ. ಸದರಿ ಫೊಟೋವನ್ನು ನಿಪಿ-2 ಎ ಂದು ಗುರುತಿಸಲಾಯಿತು. ಅದನ್ನು ಯಾರು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮಹಜರಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಮರುಹೇಳಿಕೆನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಮರುಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು**

**ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿನಾಂಕಃ 25-10-2025 ರಂದು ಚಾಸಾ-1ರ ವರು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಮದ್ಯಾಹ್ನ 1.00 ರಿಂದ 2.00 ರವರೆಗೆ ಮಹಜರನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ, ಸದರಿ ಮಹಜರಿಗೆ ನನ್ನ ಜೊತೆ ಚಾಸಾ-1 ಮತ್ತು 3 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1ರ ಸಮಯಕ್ಕೆ ನಿಪಿ2 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೇ ಎಂದರೆ ಸರಿ . ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**